## ಅರ್ಥಪೂರ್ಣ ‘ಮಹಾನಟಿ’

ಝೀ ಕನ್ನಡದ ‘ಮಹಾನಟಿ’ ರಿಯಾಲಿಟಿ ಶೋ ಎಲೆಮರೆಯ ಪ್ರತಿಭೆಗಳನ್ನು ಗುರುತಿಸುತ್ತಿದೆ. ಅರ್ಥಪೂರ್ಣವಾಗಿ ಈ ಕಾರ್ಯಕ್ರಮವನ್ನು ರೂಪಿಸಲಾಗುತ್ತಿದೆ. ರಾಜ್ಯದ ಬೇರೆ ಬೇರೆ ಪ್ರದೇಶಗಳಿಂದ ಭಿನ್ನ ಭಿನ್ನ ವ್ಯಕ್ತಿತ್ವಗಳನ್ನು ಪರಿಚಯಿಸುತ್ತಿದ್ದಾರೆ. ನುರಿತ ತಂತ್ರಜ್ಞರು, ಸಂಗೀತಗಾರರು, ತೀರ್ಪುಗಾರರು ಒಟ್ಟಾಗಿ ಈ ಕಾರ್ಯಕ್ರಮವನ್ನು ಆಕರ್ಷಣೀಯ ಮಾಡುತ್ತಿದ್ದಾರೆ. ಸ್ಪರ್ಧಿಗಳು ಈ ಅವಕಾಶದಿಂದ ದೊಡ್ಡ ಮಟ್ಟಕ್ಕೆ ಬೆಳೆಯಲಿ ಎಂದು ಹಾರೈಸುವೆ.

—ಸಾವಿತ್ರಮ್ಮ ಕೆ. ವಿಭೂತಿ, ಹರಿಹರ

## ಸಾರ್ವಕಾಲಿಕ ಮಂಗಮ್ಮ

ಚಂದನದ ‘ಕಥಾ ಸರಿತ’ದಲ್ಲಿ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ‘ಮೊಸರಿನ ಮಂಗಮ್ಮ’ ಕಥಾರೂಪಕ ಪ್ರಸಾರವಾಯಿತು. ಸಂದರ್ಭಕ್ಕೆ ತಕ್ಕ ಹಾಗೆ ಸಂಬಂಧಗಳು ಹೇಗೆ ಪಲ್ಲಟಗೊಳ್ಳುತ್ತವೆ ಎಂಬುದನ್ನು ಈ ಕಥೆ ಸೂಚಿಸುತ್ತದೆ. ಜೀವನದ ಸಂಬಂಧಗಳನ್ನು ಕೆಲವರು ಪ್ರೀತಿಯಿಂದ ಅಳೆದರೆ ಇನ್ನು ಕೆಲವರು ಹಣದಿಂದ ಅಳೆಯುತ್ತಾರೆ. ಅತ್ತೆ ಮೊಸರು ಮಾರುವ ಮಂಗಮ್ಮ ಮತ್ತು ಸೊಸೆ ಮಧ್ಯ ನಡೆಯುವ ಸಂಘರ್ಷದ ಸುಂದರ ಚಿತ್ರಣವಿದೆ. ಈ ಕಥೆಯು ಈಗಾಗಲೇ ಹಲವು ಬಾರಿ ಪ್ರಸಾರಗೊಂಡಿದ್ದರೂ ಮತ್ತೆ ಪ್ರಸಾರವಾದಾಗ ಹೊಸ ಪ್ರತಿಮೆಗಳನ್ನು, ಹೊಸ ಅರ್ಥಗಳನ್ನು ಸೂಚಿಸುತ್ತದೆ. ಕಥೆಯ ನಿರೂಪಣೆ ಶೈಲಿ ಮತ್ತು ಸಂದರ್ಭಗಳನ್ನು ಕಟ್ಟಿಕೊಡುವ ರೀತಿ ಎಲ್ಲವೂ ಪ್ರೇಕ್ಷಕನನ್ನು ಆಕರ್ಷಿಸುತ್ತದೆ. ಯಾವುದೋ ಒಂದು ಸಂದರ್ಭದಲ್ಲಿ ಬರೆದ ಕಥೆ ಇಂದಿಗೂ ಪ್ರಸ್ತುತವೆನಿಸುತ್ತದೆ.

—ಕೆ.ಪಿ. ರಾಮಗುಂಡಿ, ಬೈಲಹೊಂಗಲ

ವಾರದ ಪತ್ರ

## ಮಿಡತೆ ಕ್ರಿಕೆಟ್ ನೋಡಲು ಬಂತೆ?



ಈಗಂತೂ ಚುಟುಕು ಕ್ರಿಕೆಟ್ ಹವಾ. ಚೆನ್ನೈ ಸೂಪರ್ ಕಿಂಗ್ಸ್ ಹಾಗೂ ಗುಜರಾತ್ ಟೈಟನ್ಸ್ ನಡುವೆ ಇತ್ತೀಚೆಗೆ ನಡೆದ ಅಹಮದಾಬಾದ್ ಐಪಿಎಲ್ ಪಂದ್ಯ ವೀಕ್ಷಿಸುತ್ತಿದ್ದೆ. ಟೈಟನ್ಸ್ ತಂಡ ಬ್ಯಾಟ್ ಮಾಡುತ್ತಿರುವಾಗ ಹೆಲಿಕಾಪ್ಟರ್ ಕೀಟ (ಹಾತೆ, ಮಿಡತೆ) ಅಂಪೈರ್ ತಲೆಯ ಮೇಲೆ ಲ್ಯಾಂಡ್ ಆಗೇ ಬಿಟ್ಟಿತು!

ನೋಡಿ ಹೇಗಿದೆ ಈ ಕೀಟದ ಕೀಟಲೆ! ಅದಕ್ಕೂ ತಿಳಿದಂತಿದೆ ಎಲ್ಲಿ ಲ್ಯಾಂಡ್ ಆದರೆ ಕ್ರಿಕೆಟ್ ಸರಿಯಾಗಿ ಕಾಣುವುದು ಎಂದು. ಅಂಪೈರ್‌ಗೆ ಕಿರಿ ಕಿರಿ ಅನ್ನಿಸಿ ಒಮ್ಮೆ ಕೈಯಾಡಿಸಿ ಓಡಿಸಿದರು. ಮತ್ತೆ ಅಲ್ಲೇ ಬಂದು ಲ್ಯಾಂಡ್ ಆಗಿತ್ತು. ಕೊನೆಗೂ ಅಂಪೈರ್ ಏಕಾಗ್ರತೆಯನ್ನು ಕದಡಿದ್ದಂತೂ ಗ್ಯಾರಂಟಿ. ಬಹುಶಃ ಅದು ಹೆಲಿಕಾಪ್ಟರ್ ಷಾಟ್ ಪ್ರವೀಣ ಮಹೇಂದ್ರ ಸಿಂಗ್ ಧೋನಿಯ ಬ್ಯಾಟಿಂಗ್ ನೋಡಲು ಬಂದಿರಬಹುದು. ಧೋನಿ ಕ್ರೀಸ್‌ನಲ್ಲಿರದೆ ಕೀಪಿಂಗ್‌ನಲ್ಲಿದ್ರು. ಹರಿಕತೆಯಲ್ಲಿ ಉಪಕತೆ ಇರುವಂತೆ, ಕಿರುತೆರೆ ವೀಕ್ಷಕರಿಗೆ ಅಪರೂಪದ ಈ ಪ್ರಸಂಗ ಮುದ ನೀಡಿದ್ದಂತೂ ಹೌದು.

—ನಗರ ಗುರುದೇವ್ ಭಂಡಾರ್ಕರ್, ಹೊಸನಗರ

## ಮನರಂಜನೆ ನಡುವೆಯೂ ಜಲ ಜಾಗೃತಿ

ಝೀ ಕನ್ನಡ ವಾಹಿನಿಯ ‘ಮಹಾನಟಿ’ ಕಾರ್ಯಕ್ರಮದಲ್ಲಿ ಸ್ಪರ್ಧಿ ರಿಯಾ ಬಗರೆ ಹಾಗೂ ಸಿದ್ದು ಮಳೆಯಲ್ಲಿ ನೆನೆಯುತ್ತಾ ನರ್ತಿಸಿದರು. ಆ ಬಳಿಕ ಕಾರ್ಯಕ್ರಮದ ನಿರೂಪಕಿ ‘ನಾವು ನೀರಿನ ಮಹತ್ವ ಅರಿತಿದ್ದೇವೆ. ಇಲ್ಲಿ ಬಳಸಿರುವ ನೀರನ್ನು ಮರು ಬಳಕೆಗೆ ಉಪಯೋಗಿಸಲಾಗುತ್ತದೆ’ ಎಂದು ಸ್ಪಷ್ಟೀಕರಿಸಿದರು. ಇದು ನಿಜಕ್ಕೂ ಅವಶ್ಯವಾಗಿದ್ದು, ಸೂಕ್ತ ಸಂದೇಶ ನೀಡುತ್ತದೆ. ಸಮೂಹ ಮಾಧ್ಯಮಗಳ ಮೂಲಕ ಬಿತ್ತರಿಸುವ ಸಮಾಜಮುಖಿ ಸಂದೇಶಗಳು ನಿಜಕ್ಕೂ ಪರಿಣಾಮಕಾರಿಯಾಗಬಲ್ಲದು.

—ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ

## ಸುದ್ದಿಯೊಂದಿಗೆ ಹಸಿರುಪ್ರೀತಿ ಬಿತ್ತರಿಸಿ

ಈ ವರ್ಷದ ಮಾರ್ಚ್–ಏಪ್ರಿಲ್‌ನಲ್ಲಿ ಕರ್ನಾಟಕ ಕಾವಲಿಯಂತಾಗಿತ್ತು! ಕುಡಿಯುವ ನೀರಿನ ಹಾಹಾಕಾರ ಎಲ್ಲರನ್ನೂ ಬಾಧಿಸಿದೆ. ಅಂತರ್ಜಲ ಮಟ್ಟ ಕುಸಿದಿದೆ. ಕೆರೆಗಳು, ನದಿಗಳು ಒಣಗಿವೆ. ಅಣೆಕಟ್ಟುಗಳಲ್ಲೂ ನೀರಿಲ್ಲ. ಅಭಿವೃದ್ಧಿಯ ನೆವದಲ್ಲಿ ನಿರಂತರವಾಗಿ ನಡೆದ ಮರ, ಕೆರೆ, ಅರಣ್ಯ ನಾಶದಿಂದ ಇಂದು ಕರ್ನಾಟಕ ಬರಡಾಗುತ್ತಿದೆ. ಹಸಿರುಪ್ರೇಮ ಪ್ರಜ್ಞೆ ಮೂಡಿಸುವ ಕಾರ್ಯಕ್ರಮಗಳಿಗೆ ಕನ್ನಡ ನ್ಯೂಸ್ ಚಾನಲ್‌ಗಳು ನಿತ್ಯವೂ ಪ್ರಾಮುಖ್ಯತೆ ಕೊಡುವಂತೆ ಆಗಬೇಕು.

—ಮಂಜುಳಾ ರಾಮಶೇಷ, ಬೆಂಗಳೂರು

## ದಿವ್ಯಾ ದಡ್ಡಿಯಲ್ಲ

ಝೀ ಕನ್ನಡದ ‘ಸತ್ಯ’ ಧಾರಾವಾಹಿಯ ದಿವ್ಯಾಳ ಮೂರ್ಖತನವನ್ನು ನಿರೂಪಿಸಲು ವಿಮಾ ವ್ಯವಹಾರದ ಅನಗತ್ಯ ದೃಶ್ಯವೊಂದನ್ನು ತರಲಾಗಿದೆ. ಕುಟುಂಬದವರಿಗೆಲ್ಲ ವಿಮೆ ಮಾಡಿಸಲು ಬಾಲ ಪ್ರತಿನಿಧಿಯೊಬ್ಬರನ್ನು ಕರೆಸುತ್ತಾನೆ. ದಿವ್ಯಾಳನ್ನು ಹೊರತುಪಡಿಸಿ ಒಂದೇ ಪ್ರಪೋಸಲ್‌ನಲ್ಲಿ ಎಲ್ಲರ ಸಹಿ ಮಾಡಿಸಿ ಉಳಿದೆಲ್ಲರಿಗೆ ವಿಮೆ ಮಾಡಿಸುತ್ತಾನೆ. ಜೀವ ವಿಮೆ ಆಗಿದ್ದರೆ ಪ್ರತಿಯೊಬ್ಬರೂ ಪ್ರತ್ಯೇಕ ಪ್ರಪೋಸಲ್ ತುಂಬಬೇಕಾಗಿತ್ತು. ಆರೋಗ್ಯ ವಿಮೆಯಾಗಿದ್ದರೆ ಕುಟುಂಬದ ಯಜಮಾನನ ಸಹಿ ಮಾತ್ರ ಸಾಕಾಗುತ್ತಿತ್ತು.

ಬಾಲಕನ ಮೇಲೆ ಸೇಡು ತೀರಿಸಿಕೊಳ್ಳಲು ದಿವ್ಯಾ ರಸ್ತೆ ಬದಿ ನಿಂತವನೊಬ್ಬನನ್ನು ವಿಮಾ ಪ್ರತಿನಿಧಿ ಎಂದು ಕರೆದು ಪಾಲಿಸಿ ಮಾಡಿಸುತ್ತಾಳೆ. ಶುಲ್ಕವನ್ನು ನಗದಾಗಿಯೇ ನೀಡುತ್ತಾಳೆ. ನಂತರ ತಾನು ಮೋಸ ಹೋದೆನೆಂದು ಕೊರಗುತ್ತಾಳೆ. ಇದು ಮೇಲ್ನೋಟಕ್ಕೆ ದಿವ್ಯಾಳನ್ನು ದಡ್ಡಿ ಎಂದು ತೋರಿಸುವ ಯತ್ನ ಅನ್ನಿಸಿದರೂ, ಅದು ವಿಮೆಯ ಮಹತ್ವ ತಿಳಿಸುವ ಪ್ರಯತ್ನ.

—ವಾ. ಮುರಳೀಧರ, ತೀರ್ಥಹಳ್ಳಿ

## ಅರ್ಥಹೀನ ಕಾಯುವಿಕೆ

ಯಾವುದೇ ಧಾರಾವಾಹಿ ನೋಡಿದರೂ ಪಕ್ಕಾ ಮಸಾಲೆ ಬೆರೆತ ಕಮರ್ಷಿಯಲ್ ಕಥೆ ಎಂದು ಥಟ್ ಎಂದು ಗೊತ್ತಾಗಿಯೇ ಬಿಡುತ್ತದೆ. ಏಕೆಂದರೆ ಅದೇ ಹಳಸಲು ಸಂಭಾಷಣೆಗಳು. ಉದಾಹರಣೆ: ‘ನಾನು ಈಗಲೇ ನಡೆದ ಎಲ್ಲಾ ವಿಷಯಗಳನ್ನು ಮನೆಯವರಿಗೆ ಹೇಳಿಯೇ ಬಿಡಬೇಕು’ ಎಂದು ಧಾರಾವಾಹಿಯ ಒಂದಾದರೂ ಪಾತ್ರ ಹೇಳುತ್ತಾ ಹೇಳುತ್ತಾ ವರ್ಷಗಳೇ ಕಳೆದರೂ ಏನೂ ಹೇಳುವುದಿಲ್ಲ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ಪೆನ್ ಡ್ರೈವ್ ಮಾಡಿದ ಪಾಪವೇನು?

ಸಂಸದ ಪ್ರಜ್ವಲ್ ರೇವಣ್ಣ ಲೈಂಗಿಕ ದೌರ್ಜನ್ಯ ಎಸಗಿ, ಆ ದೃಶ್ಯಗಳನ್ನು ಚಿತ್ರೀಕರಿಸಿದ್ದಾರೆ ಎನ್ನಲಾದ ಅಪರಾಧ ಸುದ್ದಿಯನ್ನು ‘ಪೆನ್ ಡ್ರೈವ್ ಪ್ರಕರಣ’ ಎಂದು ಟೀವಿಗಳು ಕೂಗುತ್ತಿವೆ. ಇಲ್ಲಿ ಪೆನ್ ಡ್ರೈವ್ ಮಾಡಿದ ಅಪರಾಧವೇನು? ಇದು ಪೆನ್ ಡ್ರೈವ್ ಪ್ರಕರಣವಲ್ಲ. ನಕಲಿ ಪೆನ್ ಡ್ರೈವ್ ತಯಾರಿಸಿದ್ದರೆ, ಪೆನ್ ಡ್ರೈವ್ ಖರೀದಿಯಲ್ಲಿ ಗೋಲ್ ಮಾಲ್ ನಡೆಸಿದ್ದರೆ, ಪೆನ್ ಡ್ರೈವ್ ಖರೀದಿಯಲ್ಲಿ ಕಮಿಷನ್ ಹೊಡೆದಿದ್ದರೆ ಅದನ್ನು ‘ಪೆನ್ ಡ್ರೈವ್ ಪ್ರಕರಣ/ಹಗರಣ’ ಎನ್ನಬಹುದು.

—ಪಿ.ಜೆ. ರಾಘವೇಂದ್ರ, ಮೈಸೂರು